**Published by Noopura Bhramari (ನೂಪುರಭ್ರಮರಿ) – An IKS Centre (July-August 2022) As a part of Nrityashilpayatra programme (ನೃತ್ಯಶಿಲ್ಪಯಾತ್ರೆ). www.noopurabhramari.com**

# ವಿಜಯನಗರ ಸಾಮ್ರಾಜ್ಯ ಕಾಲದ ಶಿಲ್ಪಗಳಲ್ಲಿ

# *ನೃತ್ಯನಿಪುಣ ಭೃಂಗಿ*

**– ವಿದುಷಿ ದಿವ್ಯಾ ಪ್ರಸಾದ್, ಬೆಂಗಳೂರು.**

ಆಂಧ್ರಪ್ರದೇಶದ ಲೇಪಾಕ್ಷಿ ಗ್ರಾಮದಲ್ಲಿರುವ ವೀರಭದ್ರ ದೇವಾಲಯವು ವಿಜಯನಗರ ಸಾಮ್ರಾಜ್ಯದ ನಿರ್ಮಾಣ ಶೈಲಿಯನ್ನು ಪ್ರತಿಬಿಂಬಿಸುವ ಮಾದರಿಯಾಗಿದೆ. ಈ ದೇವಾಲಯವನ್ನು ಅಚ್ಯುತರಾಯನ ಆಳ್ವಿಕೆಯಲ್ಲಿ ರಾಜ್ಯಪಾಲರಾದ ವಿರೂಪಣ್ಣ ನಾಯಕ ಹಾಗೂ ವೀರಣ್ಣ ಎಂಬ ಸಹೋದರರು ನಿರ್ಮಿಸಿದರು. ಕರ್ನಾಟಕದ ಗಡಿಯಲ್ಲಿರುವ ಈ ದೇವಾಲಯದ ಹಲವು ಶಾಸನಗಳು ಕನ್ನಡದಲ್ಲಿರುವುದು ವಿಶೇಷ. ಸ್ಕಂದ ಪುರಾಣದಲ್ಲೂ ಈ ದೇವಾಲಯವನ್ನು ಶಿವನ ೧೦೮ ಪುಣ್ಯಕ್ಷೇತ್ರಗಳಲ್ಲೊಂದು ಎಂದು ಉಲ್ಲೇಖಿಸಲಾಗಿದೆ.



ಈ ದೇವಾಲಯದಲ್ಲಿ ಮುಖ್ಯವಾಗಿ ಮೂರು ಭಾಗಗಳಿವೆ. ಮುಖಮಂಟಪ ಅಥವಾ ನಾಟ್ಯ ಮಂಟಪ, ಅಂತರಾಳ ಹಾಗೂ ಗರ್ಭಗೃಹ. ಇಷ್ಟೇ ಅಲ್ಲದೆ, ದೇವಾಲಯದ ಸುತ್ತಲೂ ಎರಡು ಆವರಣಗಳಿವೆ.


ಇಲ್ಲಿನ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ನಾಟ್ಯಮಂಟಪವನ್ನು ಕಂಡಾಗ ದೇವಲೋಕವೇ ಧರೆಗಿಳಿದಂತೆ ಭಾಸವಾಗುತ್ತದೆ. ದೇವಲೋಕದ ಅಪ್ಸರೆ ರಂಭೆಯ ನರ್ತನಕ್ಕೆ ದೇವತಾ ಸಮೂಹವೇ ಮೇಳದಲ್ಲಿ ಭಾಗಿಯಾಗಿರುವುದು ಕಂಬಗಳ ಮೇಲೆ ಅದ್ಭುತವಾದ ಕೆತ್ತನೆಗಳ ರೂಪದಲ್ಲಿ ಮೂಡಿಬಂದಿದೆ. ಒಂದು ಕಂಬದಲ್ಲಿ ರಂಭೆಯ ಅದ್ಭುತವಾದ ನರ್ತನ ಭಂಗಿಯಲ್ಲಿರುವ ಜೀವ ಗಾತ್ರದ ಶಿಲ್ಪವಿದ್ದು ಆಕೆಯ ಸುತ್ತಲೂ ವೃತ್ತಾಕಾರವಾಗಿ ತಾಳವನ್ನು ಹಿಡಿದ ದತ್ತಾತ್ರೇಯ, ಪಕ್ಕದಲ್ಲಿ ಶಿವ, ಪಾರ್ವತಿ, ಸುಶಿರ ವಾದ್ಯದೊಂದಿಗೆ ಸೂರ್ಯ, ತಂಬೂರಿಯೊಂದಿಗೆ ತುಂಬುರು, ಹುಡುಕ್ಕ ಹಿಡಿದ ಶಿಲ್ಪ, ಮೃದಂಗ ಮೃದಂಗವನ್ನು ನುಡಿಸುತ್ತಿರುವ ನಂದಿ ಹಾಗೂ ಪಂಚಮುಖಿ ವಿಶ್ವಕರ್ಮ, ನೃತ್ಯದ ಅಧಿಪತಿ ನಟರಾಜ, ವೀಣೆ ಹಿಡಿದಿರುವ ಚಂದ್ರನ ಶಿಲ್ಪಗಳನ್ನು ಪ್ರತ್ಯೇಕ ಕಂಬಗಳಲ್ಲಿ ಕಾಣಬಹುದು. ತಾಳ ಹಿಡಿದಿರುವ ಬ್ರಹ್ಮ ಹಾಗೂ ವೀಣೆಯೊಂದಿಗೆ ಸರಸ್ವತಿಯ ಶಿಲ್ಪಗಳೂ ನಾಟ್ಯಮಂಟಪದಲ್ಲಿದೆ.

ರಂಭೆಯ ಎದುರಿನ ಕೋನಕ್ಕೆ ಅಂದರೆ ಅಭಿಮುಖವಾಗಿ ಸ್ವಲ್ಪ ದೂರದಲ್ಲಿ ಮರೆಯಾಗಿ ನೃತ್ಯ ಭಂಗಿಯಲ್ಲಿ ನಿಂತಿರುವ ಪುರುಷ ಶಿಲ್ಪವಿದೆ. ಮೇಲ್ನೋಟಕ್ಕೆ ಇದು ಮತ್ತೊಂದು ನೃತ್ಯ ಶಿಲ್ಪದಂತೆ ಕಂಡರೂ ಸೂಕ್ಷ್ಮವಾಗಿ ಮನಿಸಿದಾಗ ಈ ಪುರುಷನಿಗೆ ಮೂರು ಕಾಲುಗಳಿದ್ದು ಆತನ ನೃತ್ಯದ ಭಂಗಿಯು ರಂಭೆಯ ನೃತ್ಯ ಭಂಗಿಯನ್ನೇ ಹೋಲುವಂತಿದ್ದು, ಯಾರೋ ಮರೆಯಲ್ಲಿ ನಿಂತು ಆಕೆಯ ನೃತ್ಯವನ್ನು ಅನುಕರಣೆ ಮಾಡುತ್ತಿರುವಂತೆ

ಭಾಸವಾಗುತ್ತದೆ. ಇಲ್ಲವೇ ಈತ ಹೇಳಿಕೊಟದ್ದನ್ನೇ ಆಕೆ ನರ್ತಿಸುವಂತಿದೆ. ಇದು ಮತ್ತಾರು ಅಲ್ಲ, ಶಿವನ ಪ್ರಮಥರಲ್ಲಿ ಪ್ರಮುಖ ಸ್ಥಾನ ಪಡೆದಿರುವ **'ಭೃಂಗಿ'** ಯ ಶಿಲ್ಪ.



ನಾಟ್ಯಮಂಟಪದಲ್ಲಿ ಭೃಂಗಿ



ನಾಟ್ಯಮಂಟಪದಲ್ಲಿ ರಂಭೆ

ಇಲ್ಲಿ ಭೃಂಗಿಯನ್ನು ರಂಭೆಗೆ ನಾಟ್ಯವನ್ನು ಕಲಿಸುವ ಗುರುವಿನ ರೂಪದಲ್ಲಿ ತೋರಿಸಲಾಗಿದೆ. ಆತ ಮರೆಯಲ್ಲಿ ನಿಂತು ನಾಟ್ಯ ಮಾಡುತ್ತಿರುವ ರಂಭೆಗೆ ಸೂಚನೆಗಳನ್ನು ನೀಡುತ್ತಾನೆ ಎಂದು ಹೇಳಲಾಗುತ್ತದೆ.

ಮೂರು ಕಾಲುಗಳುಳ್ಳ ಶಿಲ್ಪವನ್ನು ಕಂಡಾಗ ಎಂತಹವರಿಗಾದರೂ ಭೃಂಗಿಯ ಬಗ್ಗೆ ಹೆಚ್ಚು ತಿಳಿಯಬೇಕೆಂಬ ಕುತೂಹಲ ಮೂಡುವುದು ಸಹಜ. ಪುರಾಣದಲ್ಲಿ ಭೃಂಗಿಯ ಬಗ್ಗೆ ಅನೇಕ ಸ್ವಾರಸ್ಯಕರ ಕಥೆಗಳಿದ್ದು ಅವುಗಳಲ್ಲಿ ಕೆಲವನ್ನು ಇಲ್ಲಿ ಸಂಕ್ಷಿಪ್ತವಾಗಿ ಹೇಳುವ ಪ್ರಯತ್ನ ಮಾಡಿದ್ದೇನೆ.



ಶಿವನ ಎದುರು ವಾದ್ಯವನ್ನು ಹಿಡಿದ ಭೃಂಗಿ

ಭೃಂಗಿಯ ಜನನದ ಬಗ್ಗೆ ಕೂತೂಹಲಕಾರಿ ಕತೆಯೊಂದಿದೆ. ಶಿವನ ಬೆವರ ಹನಿಯಿಂದ ಜನಿಸಿದ ಅಂಧಕನು ಮುಂದೆ ಮಹಾ ಲೋಕ ಕಂಟಕನಾಗಿ ಬೆಳೆಯುತ್ತಾನೆ. ಒಂದು ದಿನ ಆತ ತನ್ನ ತಾಯಿ ಪಾರ್ವತಿಯನ್ನೇ ಮೋಹಿಸಿದಾಗ ಶಿವನು ಕೋಪಗೊಂದು ಅಂಧಕನ ರಕ್ತವನ್ನು ಸಂಪೂರ್ಣವಾಗಿ ಹೀರಿ ಅವನನ್ನು ಕೇವಲ ಆಸ್ಥಿಪಂಜರವನ್ನಾಗಿ ಮಾಡುತ್ತಾನೆ. ಅಂಧಕನಿಗೆ ತನ್ನ ತಪ್ಪಿನ ಅರಿವಾಗಿ ಪರಶಿವನಲ್ಲಿ ಕ್ಷಮಿಸುವಂತೆ ಮೊರೆ ಹೋದಾಗ ಶಿವನು ಕನಿಕರಗೊಂಡು ಅವನನ್ನು ತನ್ನ ಭಕ್ತನನ್ನಾಗಿ ಅಂಗೀಕರಿಸಿ ತನ್ನ

ಗಣದಲ್ಲಿ ಪ್ರಮುಖ ಸ್ಥಾನವನ್ನು ನೀಡುತ್ತಾನೆ. ನಂತರದಲ್ಲಿ ಅಂಧಕನು ಭೃಂಗಿಯೆಂಬ ಹೆಸರಿನಿಂದ ಕರೆಯಲ್ಪಟ್ಟು ಮಹಾ ಶಿವಭಕ್ತನೆನಿಸಿಕೊಳ್ಳುತ್ತಾನೆ.

ಭೃಂಗಿಯು ಮೂರು ಕಾಲು ಹಾಗೂ ಅಸ್ಥಿ ಪಂಜರದಂತಹ ದೇಹವನ್ನು ಹೊಂದಿರುವುದಕ್ಕೆ ಮತ್ತೊಂದು ಸ್ವಾರಸ್ಯಕರ ಕತೆಯಿದೆ. ಒಮ್ಮೆ ಶಿವನ ಪರಮಭಕ್ತನಾದ ಭೃಂಗಿಯು ಇತರೆ ಋಷಿಗಳೊಂದಿಗೆ ಕೈಲಾಸ ಪರ್ವತಕ್ಕೆ ಭೇಟಿ ನೀಡಿದಾಗ, ಎಲ್ಲಾ ಋಷಿಗಳು ಶಿವ ಮತ್ತು ಪಾರ್ವತಿಯರಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿದರು. ಆದರೆ ಕೇವಲ ಶಿವನೇ ಶ್ರೇಷ್ಠ ಎಂದು ನಂಬಿದ್ದ ಭೃಂಗಿಯು ಪಾರ್ವತಿಯನ್ನು ನಿರ್ಲಕ್ಷಿಸಿ ಕೇವಲ ಶಿವನಿಗೆ ಮಾತ್ರ ಪ್ರದಕ್ಷಿಣೆ ಹಾಕಿ ನಮಸ್ಕರಿಸುತ್ತಾನೆ. ಇದು ಹೀಗೆಯೇ ಮುಂದುವರೆದಾಗ ಬೇಸರಗೊಂಡ ಪಾರ್ವತಿಯು, ಶಿವ ಮತ್ತು ಶಕ್ತಿಯು ಬೇರೆಯಲ್ಲ ಇಬ್ಬರೂ ಒಂದೇ ಎಂದು ಭೃಂಗಿಗೆ ಮನವರಿಕೆ ಮಾಡುವ ಪ್ರಯತ್ನ ಮಾಡುತ್ತಾಳೆ. ಆ ಪ್ರಯತ್ನ ವಿಫಲವಾದಾಗ, ಆತ ಕೇವಲ ಶಿವನ ಸುತ್ತ ಪ್ರದಕ್ಷಿಣೆ ಮಾಡುವುದನ್ನು ತಪ್ಪಿಸಲು ಪಾರ್ವತಿಯು ಶಿವನ ತೊಡೆಯೇರಿ ಕೂರುತ್ತಾಳೆ. ಇದನ್ನು ಗಮನಿಸಿದ ಭೃಂಗಿಯು ಭೃಂಗದ ರೂಪದಲ್ಲಿ ಕೇವಲ ಶಿವನ ಶಿರಸ್ಸಿಗೆ ಪ್ರದಕ್ಷಿಣೆ ಹಾಕಿ ಕೈಲಾಸವನ್ನು ತೊರೆಯುತ್ತಾನೆ. ಇದನ್ನು ಹೇಗಾದರೂ ತಡೆಯಲೇಬೇಕೆಂಬ ಪಣ ತೊಟ್ಟು ಪಾರ್ವತಿಯು ಶಿವನಲ್ಲಿ ಅರಿಕೆ ಮಾಡಿಕೊಂಡಾಗ ಶಿವ–ಪಾರ್ವತಿಯರು ವಿಲೀನಗೊಂಡು ಅರ್ಧನಾರೀಶ್ವರ (ಶಿವನ ಅರ್ಧವನ್ನು ಶಕ್ತಿಯಾಗಿ ಪ್ರತಿನಿಧಿಸುವ ರೂಪ) ಸ್ವರೂಪವನ್ನು ಪಡೆಯುತ್ತಾರೆ. ಇದರಿಂದ ಭೃಂಗಿಯು ತನ್ನ ಸುತ್ತ ಪ್ರದಕ್ಷಿಣೆ ಮಾಡದೆ ವಿಧಿಯಿಲ್ಲ ಎಂದು ಪಾರ್ವತಿಯು ಭಾವಿಸುತ್ತಾಳೆ. ಆದರೆ, ಭೃಂಗಿಯು ಚಾಣಾಕ್ಷತನದಿಂದ ಸಣ್ಣ ಭೃಂಗವಾಗಿ ರೂಪಾಂತರಗೊಂಡು ಅರ್ಧನಾರೀಶ್ವರರ ನಡುವೆ ರಂಧ್ರವನ್ನು ಮಾಡಿ ಕೇವಲ ಶಿವನ ಸುತ್ತ ಮಾತ್ರ ಪ್ರದಕ್ಷಿಣೆ ಹಾಕುತ್ತಾನೆ. ಇದರಿಂದ ಬಹಳ ಕ್ರೋಧಗೊಂಡ ಪಾರ್ವತಿಯು ಕೇವಲ ತಂದೆಯ (ಶಿವನ) ನ್ನಷ್ಟೇ ಪೂಜಿಸುವ ನಿನ್ನ ದೇಹದಿಂದ ತಾಯಿ (ಶಕ್ತಿ) ಯ ಅಂಶ ದೂರವಾಗಲಿ ಎಂದು ಶಪಿಸುತ್ತಾಳೆ. ಆಗ ಭೃಂಗಿಯು ತನ್ನ ಶರೀರದಿಂದ ರಕ್ತ ಮತ್ತು ಮಾಂಸವನ್ನು ಕಳೆದುಕೊಂಡು ಕೇವಲ ಅಸ್ಥಿಪಂಜರದೊಂದಿಗೆ ಉಳಿಯುತ್ತಾನೆ. ತನ್ನ ಕಾಲ ಮೇಲೆ ನಿಲ್ಲಲೂ ಸಾಧ್ಯವಾಗದಂತಹ ಪರಿಸ್ಥಿತಿಯಲ್ಲಿದ್ದ ಭೃಂಗಿಯನ್ನು ಕಂಡು ಮರುಗಿದ ಶಿವನು ಆತನಿಗೆ ಮೂರನೆಯ ಕಾಲನ್ನು ಕರುಣಿಸುತ್ತಾನೆ. ಶಿವ ಮತ್ತು ಶಕ್ತಿ ಒಂದೇ ಎಂಬ ಸತ್ಯವನ್ನು ಅರಿತುಕೊಂಡ ಭೃಂಗಿಯು ಪಾರ್ವತಿಯ ಕ್ಷಮೆ ಕೇಳಿ ತನಗೆ ಮೂರನೆಯ ಪಾದವನ್ನು ನೀಡಿದ ಶಿವನ ಕರುಣಾಮಯ ಸ್ವಭಾವವನ್ನು ಕೊಂಡಾಡಿ ಸಂತೋಷದಿಂದ ನರ್ತಿಸುತ್ತಾನೆ.

ನಾಟ್ಯ ಹಾಗೂ ಸಂಗೀತದಲ್ಲಿ ಭೃಂಗಿಯ ನೈಪುಣ್ಯದ ಬಗ್ಗೆಯೂ ಹಲವು ಉಲ್ಲೇಖಗಳಿವೆ. ಆದಿ ಶಂಕರಾಚಾರ್ಯರು ತಮ್ಮ ಶಿವಾನಂದಲಹರಿಯಲ್ಲಿ (೫೧ನೇ ಶ್ಲೋಕ) ಶಿವನನ್ನು ವರ್ಣಿಸುತ್ತಾ– "*ಭೃಂಗಿಶ್ಚ ನಟನೋತ್ಕಟ*" ಎಂದರೆ ಭೃಂಗಿಯ ಆಶಯದಂತೆ ನರ್ತಿಸುವವನು ಎಂದು ಹೇಳಿದ್ದಾರೆ. ಶಿವನ ತಾಂಡವ ನೃತ್ಯದ ಪ್ರಾರಂಭ ಹಾಗೂ ಮುಕ್ತಾಯ ಭೃಂಗಿಯ ಆಣತಿಯ ಮೇರೆಗೆ ನಡೆಯುತ್ತದೆ ಎಂದೂ ಕೂಡ ಇದನ್ನು ವ್ಯಾಖ್ಯಾನಿಸಲಾಗಿದೆ

ಸಾಮಾನ್ಯ ಶಕ ೧೧೬೦ರಲ್ಲಿ ರಚನೆಯಾದ ಹರಿಹರ ರಗಳೆಯಲ್ಲಿ[1] ಭೃಂಗಿಯು ಕಿನ್ನರ ಕಿನ್ನರಿಯರೊಂದಿಗೆ ಶಿವನ ಎದುರು ನರ್ತಿಸಿರುವುದನ್ನು ಮತ್ತು ಆತನ ನೃತ್ಯ ವೈಖರಿಯನ್ನು ಬಹಳ ಸೊಗಸಾಗಿ ವರ್ಣಿಸಿರುವುದನ್ನು ಉಲ್ಲೇಖಿಸಲಾಗಿದೆ.

References:

[1] ಭೃಂಗಿ ರಗಳೆ: ಡಾ. ತುಳಸಿ ರಾಮಚಂದ್ರ ಅವರ ಪದಗತಿ ಪಾದಗತಿ ಎಂಬ ಸಂಶೋಧನ ಕೃತಿ

2. Interesting facts about Bhringi(hinduismoutlook.com)
3. Shivananda Lahari (shaivam.org)
4. Bhringi - The Story of Devotion and Curse(teamgsquare.com)

Copyright Protected

ಕವಿ ಶ್ರೀನಾಥರು ತಮ್ಮ ಕಾಶಿ ಖಾಂಡಂ ಎಂಬ ಗ್ರಂಥದಲ್ಲಿ ಕಾಶಿಯಲ್ಲಿ ತನ್ನ ಜೀವನದ ಅಂತಿಮ ಯಾತ್ರೆಯ ಸನಿಹದಲ್ಲಿರುವ ವ್ಯಕ್ತಿಯ ಮನಸ್ಸಿನಿಂದ ಭಯವನ್ನು ಹೋಗಲಾಡಿಸಿ ಆತನ ಹಣೆಗೆ ವಿಭೂತಿಯನ್ನು ತ್ರಿಪುಂಡವಾಗಿ ಹಚ್ಚಿ ಮುಕ್ತಿಯೆಡೆಗೆ ಕೊಂಡೊಯ್ಯುವ ಭೃಂಗಿಯ ಪಾತ್ರವನ್ನು ವಿವರಿಸಿದ್ದಾರೆ.

ಹೀಗೆ ಹುಡುಕುತ್ತಾ ಹೋದಷ್ಟೂ ನಮಗೆ ಭೃಂಗಿಯ ಬಗ್ಗೆ ಹಲವಾರು ಮಾಹಿತಿಗಳು ಲಭ್ಯವಾಗುತ್ತವೆ. ನಮ್ಮ ಪುರಾಣದಲ್ಲಿ ಇಂತಹ ಸಾವಿರಾರು ದೇವ-ದೇವತೆಗಳಿದ್ದು ಪ್ರತಿಯೊಬ್ಬರಿಗೂ ಅವರದೇ ಆದ ವಿಶೇಷ ಗುಣಗಳು ಮತ್ತು ಪೌರಾಣಿಕ ಹಿನ್ನೆಲೆಯಿದೆ. ಅವುಗಳನ್ನು ನಾವು ತಿಳಿದು ಮತ್ತೊಬ್ಬರಿಗೂ ತಿಳಿಸುವ ಕಾರ್ಯವಾಗಬೇಕಿದೆ. ಈ ನಿಟ್ಟಿನಲ್ಲಿ ನಮ್ಮ ಪ್ರಾಚೀನ ದೇವಾಲಯಗಳು ಮತ್ತು ಅವುಗಳಲ್ಲಿನ್ನ ಕೆತ್ತನೆಗಳು ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿವೆ.

------

**<u>ಲೇಖಿಕೆಯ ಪರಿಚಯ</u>**



ಭರತನಾಟ್ಯ ಕಲಾವಿದೆ ವಿದುಷಿ ಶ್ರೀಮತಿ ದಿವ್ಯಾ ಪ್ರಸಾದ್, ಹಲವು ವರ್ಷಗಳ ಕಾಲ ಶ್ರೀಮತಿ ಸಂಧ್ಯಾ ಕೇಶವರಾವ್ ಅವರಲ್ಲಿ ನೃತ್ಯಾಭ್ಯಾಸವನ್ನು ಮಾಡಿ, ನಂತರ ಗುರು ಕರ್ನಾಟಕ ಕಲಾಶ್ರೀ ಬಿ. ಭಾನುಮತಿ ಹಾಗೂ ಶ್ರೀಮತಿ ಶೀಲಾ ಚಂದ್ರಶೇಖರ್ ಇವರ ಮಾರ್ಗದರ್ಶನದಲ್ಲಿ ಭರತನಾಟ್ಯ ತರಬೇತಿಯನ್ನು ಮುಂದುವರೆಸಿದ್ದಾರೆ. ಭರತನಾಟ್ಯದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಿಂದ ವಿದ್ವತ್ ಪದವಿ ಹಾಗು ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿಯನ್ನು ಪಡೆದಿರುವ ಇವರು, 2008ರಲ್ಲಿ ಭರತನಾಟ್ಯ ರಂಗಪ್ರವೇಶವನ್ನು ಪೂರೈಸಿ, ದೇಶ ವಿದೇಶಗಳಲ್ಲಿ ಹಲವಾರು ಪ್ರತಿಷ್ಠಿತ ವೇದಿಕೆಗಳಲ್ಲಿ ನಾಟ್ಯ ಪ್ರದರ್ಶನಗಳನ್ನು ನೀಡಿದ್ದಾರೆ.ಇಂಜಿನಿಯರಿಂಗ್ ಪದವಿಯನ್ನು ಗಳಿಸಿ ಸಾಫ್ಟ್ ವೇರ್ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಇವರು ಹಲವು ವರ್ಷಗಳ ಹಿಂದೆ ತಮ್ಮ ವೃತ್ತಿಯನ್ನು ತ್ಯಜಿಸಿ "ಕಲಾಬಿಂದು" ಎಂಬ ನಾಟ್ಯಶಾಲೆಯನ್ನು ಸ್ಥಾಪಿಸಿ, ಹಲವಾರು ವಿದ್ಯಾರ್ಥಿಗಳಿಗೆ ನಾಟ್ಯ ತರಬೇತಿಯನ್ನು ನೀಡುತ್ತಾ ಕಲಾಸೇವೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. **ಪ್ರಸ್ತುತ ಇವರು ನೂಪುರ ಭ್ರಮರಿ ಸಂಸ್ಥೆಯ 'ನೃತ್ಯಶಿಲ್ಪಯಾತ್ರೆ' ಅಧ್ಯಯನದ ತರಬೇತಿಯನ್ನು (ಇಂಟರ್ನ್ ಶಿಪ್) ಪಡೆಯುತ್ತಿದ್ದಾರೆ.**

Copyright Protected